**R.A.No.13/2024** **DW-1**

<u>ದಿನಾಂಕಃ **01/12/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎಂ ಸಿ ಜೆ ವಕೀಲರಿಂದಃ</u>

ನಾನು ಈ ದಾವೆಯಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಡಿ-8- O.S.No.247/2024 ರ ವಾದ ಪತ್ರದ ಧೃಡೀಕೃತ ಪ್ರತಿ

<u>ಪಾಟೀ ಸವಾಲುಃ ಮೇಲ್ಮನವಿದಾರರ ಪರವಾಗಿ ಶ್ರೀ ಜಿ ಹೆಚ್ ಎಂ ವಕೀಲರಿಂದಃ</u>

1. 2ನೇ ಅಧಿಕ ಸಿವಿಲ್ ನ್ಯಾಯಾಲಯ ಅರಕಲಗೂಡು ದಲ್ಲಿ ಸರ್ವೇ ನಂ.18/9 ಮತ್ತು 18/8 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೇಲ್ಮನವಿದಾರರು ದಾವೆ ಮಾಡಿದ್ದರು ಎಂದರೆ ಸರಿ. ಮೇಲ್ಮನವಿದಾರರು ನನ್ನ ವಿರುದ್ಧ ಕ್ರಯಪತ್ರದ ರದ್ಧತಿಗೆ ದಾವೆ ಮಾಡಿದ್ದರು ಎಂದರೆ ಸರಿ. ನನಗೆ ಸರ್ವೇ ನಂ.18/9 ರಲ್ಲಿ ಜಮೀನು ಇರುತ್ತದೆ. ಸರ್ವೇ ನಂ.18/8 ರಲ್ಲಿ ನನಗೆ ಯಾವುದೇ ಜಮೀನು ಇರುವುದಿಲ್ಲ. ಅಬ್ದುಲ್ ಖಾದರ್ ರವರಿಗೆ ಸರ್ವೇ ನಂ.18/8 ರ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅವರಿಂದ ಜಮೀನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಅಬ್ದುಲ್ ಖಾದರ್ ರವರಿಂದ ಎಷ್ಟು ಜಮೀನು ಖರೀದಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು ಅಬ್ದುಲ್ ಖಾದರ್ ರವರಿಂದ ನನ್ನ ತಾತ ಜಮೀನು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾತ ಸರ್ವೇ ನಂ.18/8 ಮತ್ತು 18/9 ರ ಜಮೀನುಗಳನ್ನು ಲಕ್ಕಯ್ಯ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಜಮೀನನ್ನು ಲಕ್ಕಯ್ಯರವರು ಎಂ.ಎಸ್.ರಾಮಅಯ್ಯಂಗಾರ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ಮಲ್ಲಿಕಾರ್ಜುನ್ ರವರು ಅಬ್ದುಲ್ ಖಾದರ್ ರವರಿಂದ ಸ್ವತ್ತು ಖರೀದಿ ಮಾಡಿದ ಬಗ್ಗೆ ಯಾವುದೇ ಪಹಣಿ ಪತ್ರಿಕೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ಸರ್ವೇ ನಂ.18/9 ರ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ಹಿಂದೆಯೂ ಸಹ ಸರ್ವೇ ನಂ.18/9 ರ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿ ಇತ್ತು ಎಂದು ಗೊತ್ತಿಲ್ಲ. ನನ್ನ ತಾತ ಸರ್ವೇ ನಂ.18/8 ರ ಚೆಕ್ಕುಬಂದಿಯನ್ನು ನಮೂದಿಸಿ ಸರ್ವೇ ನಂ.18/9 ರ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ಖರೀದಿ ಮಾಡಿದ ಬಗ್ಗೆ ಹಾಗೂ ಮಾರಾಟ ಮಾಡಿದ ಬಗ್ಗೆ ಯಾವುದೇ ಖರೀದಿ ಪತ್ರಗಳು ಇಲ್ಲ ಎಂದರೆ ಸರಿ. ಸರ್ವೇ ನಂ.18/8 ಹಾಗೂ 18/9 ರ ಸ್ವತ್ತುಗಳು ಶಿವನಮ್ಮ ಹಾಗೂ ಪುಟ್ಟತಾಯಮ್ಮರವರಿಗೆ ಸೇರಿದ ಸ್ವತ್ತುಗಳು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.18/8 ಹಾಗೂ 18/9 ರ ಸ್ವತ್ತಿನ ಖಾತೆಯನ್ನು

ಅಕ್ರಮವಾಗಿ 2005 ರಲ್ಲಿ ನಾನು ವರ್ಗಾವಣೆ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಲಕ್ಕಯ್ಯ, ಪುಟ್ಟ, ಅಬ್ದುಲ್ ಖಾದರ್, ರಾಮಅಯ್ಯಂಗಾರ್ ಅವರುಗಳಿಗೆ ಖಾತೆ ಎಂದಿಗೂ ವರ್ಗಾವಣೆಯಾಗಿರಲಿಲ್ಲ ಅವರಿಂದ ನಾನು ಖಾತೆ ವರ್ಗಾವಣೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಅಕ್ರಮವಾಗಿ ಖಾತೆ ವರ್ಗಾವಣೆ ಮಾಡಿಕೊಂಡಿದ್ದರು ಎಂದು ಅದು ಅಕ್ರಮ ಎಂದು ನಂತರ ಮೇಲ್ಮನವಿದಾರರ ಹೆಸರಿನಲ್ಲಿ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.18/8 ಸ್ವತ್ತಿನ ಖಾತೆ ನನ್ನ ತಂದೆ ಬಸವರಾಜಪ್ಪನ ತಮ್ಮ ಅಂದರೆ ನನ್ನ ಚಿಕ್ಕಪ್ಪ ಅಂದಾನಪ್ಪ ರವರು ಪೌತಿಯ ಮೇರೆಗೆ ಲೋಲಾಕ್ಷಿಯವರಿಗೆ ಖಾತಾ ವರ್ಗಾವಣೆ ಮಾಡಿಸಿದ್ದಾರೆ ಎಂದರೆ ಯಾರು ಏನು ಮಾಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಂತ ಇದ್ದಾಗಲೇ ನನ್ನ ತಂದೆ ಪೌತಿಯಾಗಿದ್ದಾರೆ ಎಂದು ನನ್ನ ತಂದೆಯ ತಮ್ಮ ಅಂದಾನಪ್ಪ ಖಾತಾ ವರ್ಗಾವಣೆ ಮಾಡಿಸಿದ್ದರು ಎಂದರೆ ಸಾಕ್ಷಿದಾರರು ಒಟ್ಟಾಗಿ ಇದ್ದಾಗ ಆ ರೀತಿ ಖಾತಾ ವರ್ಗಾವಣೆಯಾಗಿದೆ ಎಂದು ನುಡಿಯುತ್ತಾರೆ. ಸರ್ವೆ ನಂ.18/8 ರಲ್ಲಿ ನನ್ನ ತಂದೆ ಜೀವಂತ ಇದ್ದರೂ ನನ್ನ ಚಿಕ್ಕಪ್ಪ ಪೌತಿ ಖಾತೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.18/8 ಮತ್ತು 18/9 ರ ಚೆಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ನಮಗೆ ಸೇರಿದ ಸ್ವತ್ತು ಕೋಟೆ ಕರ್ಪೂರವಳ್ಳಿಯಲ್ಲಿ ಇರುತ್ತದೆ. ನಮ್ಮ ಸ್ವತ್ತು ದಾಖಲಾತಿಗಳ ಪ್ರಕಾರ ಬೇಲಿ ಕರ್ಪೂರವಳ್ಳಿಯಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ತಕರಾರು, ಪ್ರಮಾಣ ಪತ್ರಿಕೆ ಮತ್ತು ಉಪವಿಭಾಗಾಧಿಕಾರಿಗಳ ಮುಂದೆ ನಮ್ಮ ಸ್ವತ್ತು ಬೇಲೆ ಕರ್ಪೂರವಳ್ಳಿಯಲ್ಲಿ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಂತರಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅಕ್ರಮವಾಗಿ ಖಾತಾ ವರ್ಗಾವಣೆ ಮಾಡಿಕೊಂಡಿರುವ ಕಾರಣ ಆರೋಗ್ಯವಂತರಾಗಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು